# ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ

# DIRECTORATE OF MEDICAL EDUCATION

ಆನಂದರಾವ್ ವೃತ್ತ, ಬೆಂಗಳೂರು-9.
Ananda Rao Circle, Bangalore-9.
Email:dmekarnataka@yahoo.com.n
Ph: 080-22870060


Date: 02-11-2019

ಸಂಖ್ಯೆ: ವೈಶಿ/ಎಸ್ಆರ್ಓ(1)/72/2019-20

## ಅಧಿಸೂಚನೆ

1. ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಾಮರಾಜನಗರ
2. ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ.
3. ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಾರವಾರ.
4. ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಡಿಕೇರಿ.
5. ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ.
6. ಗುಲ್ಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗುಲ್ಬರ್ಗಾ.

ಇಲ್ಲಿ ಖಾಲಿ ಇರುವ ನಿರ್ದೇಶಕರ ಹುದ್ದೆಯ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿಗದಿತ ಕನಿಷ್ಠ ವಿದ್ಯಾರ್ಹತೆ ಮತ್ತು ಇತರೆ ವಿವರಗಳು ಎಂ.ಸಿ.ಐ ನಿಯಮಾವಳಿಗಳನ್ವಯ ಹಾಗೂ ಸದರಿ ಸಂಸ್ಥೆಯ ಬೈಲಾಗಳನ್ವಯ ಪರಿಗಣಿಸಲಾಗುವುದು.

**ಅರ್ಹತಾ ಮಾನದಂಡಗಳು:**

1. ಭಾರತೀಯ ವೈದ್ಯಕೀಯ ಪರಿಷತ್ತಿನಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಿಂದ ವೈದ್ಯಕೀಯ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿ ಕರ್ನಾಟಕದ ಸರ್ಕಾರಿ ಸ್ವಾಯುತ್ತ ವೈದ್ಯಕೀಯ ಕಾಲೇಜು/ಸಂಸ್ಥೆಗಳಲ್ಲಿ ಕನಿಷ್ಠ 10 ವರ್ಷ ಪ್ರಾಧ್ಯಾಪಕರು/ಸಹಪ್ರಾಧ್ಯಾಪಕರು/ರೀಡರ್ ಆಗಿ ಕರ್ತವ್ಯ ನಿರ್ವಹಿಸಿದ ಬೋಧನಾ ಅನುಭವ ಹೊಂದಿರಬೇಕು. ಈ ಪೈಕಿ ವಿಭಾಗವೊಂದರಲ್ಲಿ ಕನಿಷ್ಠ 5 ವರ್ಷ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರಬೇಕು. ಈ ಹುದ್ದೆಗಳ ನೇಮಕಾತಿಯಲ್ಲಿ ವಿಭಾಗದ ಮುಖ್ಯಸ್ಥರಿಗೆ ಆದ್ಯತೆ ನೀಡಲಾಗುವುದು. ನಿರ್ದೇಶಕರ ಆಯ್ಕೆಯನ್ನು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾವಳಿ ಪ್ರಕಾರ ಹಾಗೂ ಸಂಸ್ಥೆಗಳ ಬೈಲಾ ರೀತ್ಯಾ ಮಾಡಲಾಗುವುದು.
2. ಅಭ್ಯರ್ಥಿಗಳು ವೈದ್ಯಕೀಯ ಅಧೀಕ್ಷಕರಾಗಿ ಆಡಳಿತಾನುಭವ ಹೊಂದಿರಬೇಕು ಅಥವಾ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರಾಗಿ 5 ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿದವರಿಗೆ ಆದ್ಯತೆ ನೀಡಲಾಗುವುದು.
3. ಅರ್ಜಿ ಸಲ್ಲಿಸುವ ಅಭ್ಯರ್ಥಿಯ ವಯಸ್ಸು 58 ವರ್ಷಗಳನ್ನು ಮೀರಿರಬಾರದು ಅಥವಾ ವಯೋನಿವೃತ್ತಿ ಹೊಂದಲು ಕನಿಷ್ಠ 2 ವರ್ಷಗಳ ಸೇವಾ ಅವಧಿ ಬಾಕಿ ಇರಬೇಕು.
4. ಅಭ್ಯರ್ಥಿಯು ಖಾಯಂ ಪೂರ್ವ ಸೇವಾ ಅವಧಿಯನ್ನು ಪೂರ್ಣಗೊಳಿಸಿರಬೇಕು.
5. ನಿರ್ದೇಶಕರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾವಳಿಗಳನ್ನು ಪೂರೈಸಿರಬೇಕು.

**ವೇತನ ಶ್ರೇಣಿ:-** 37,400-67,000 + ಎ.ಜಿ.ಪಿ 10,000/- ಮತ್ತು ಅನ್ವಯವಾಗುವ ಭತ್ಯೆಗಳು

**ಸೇವಾವಧಿ:-**

ನೇಮಕಾತಿಯ ದಿನಾಂಕದಿಂದ ಮೂರು ವರ್ಷಗಳು, ಅಥವಾ ಆಯಾ ಸಂಸ್ಥೆಯ ಬೈಲಾದನ್ವಯ ಅಥವಾ ಮುಂದಿನ ಸರ್ಕಾರದ ಆದೇಶದವರೆಗೆ (ಯಾವುದು ಮೊದಲೊ ಅಲ್ಲಿಯವರೆಗೆ)

ಪು.ತಿ.ನೋ

ನಿಗದಿತ ಅರ್ಜಿ ನಮೂನೆಯನ್ನು ಡಿ.ಎಂ.ಇ. ವೆಬ್‌ಸೈಟ್: www.karnataka.gov.in/dmekarnataka ಅಥವಾ ಆಯಾ ಸಂಸ್ಥೆಯ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು, ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಬೆಂಗಳೂರು ಇವರ ಹೆಸರಿನಲ್ಲಿ ರೂ. 5000/–ಗಳ ಡಿಮ್ಯಾಂಡ್ ಡ್ರಾಫ್ಟ್ ಅನ್ನು (ಹಿಂದಿರುಗಿಸಲಾಗದಿರುವ) ಪಡೆದು ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ನೋಂದಾಯಿತ ಅಂಚೆ ಮುಖಾಂತರ ಸ್ವೀಕೃತಿ ಬಾಕಿ ಪತ್ರದೊಂದಿಗೆ ಸಲ್ಲಿಸುವುದು.

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 12–11–2019**. ಸಂದರ್ಶನದ ದಿನಾಂಕ ಮತ್ತು ಸ್ಥಳವನ್ನು ನಂತರ ತಿಳಿಸಲಾಗುವುದು.

ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಬೆಂಗಳೂರು.

Director of Medical Education
Ananda Rao Circle, Bangalore